

## 'ತುಳಸೀಕಟ್ಟೆ' ರೂಪಾಂತರ



'ಬ್ಯೂಟಿಫುಲ್ ಮನಸುಗಳು' ಚಿತ್ರದಲ್ಲಿ ಚಿತ್ರದ ನಾಯಕಿಯನ್ನು ನಾಯಕ ಕರೆಯುವ ಅಡ್ಡಹೆಸರು – ತುಳಸೀಕಟ್ಟೆ. ಇದು ಚಿತ್ರದ ನಾಯಕಿ ಶ್ರುತಿ ಹರಿಹರನ್ ಅವರು ಈವರೆಗೆ ನಟಿಸಿರುವ ಬಹುತೇಕ ಪಾತ್ರಗಳಿಗೆ ಅನ್ವಯಿಸುವ ವಿಶೇಷಣ. ಆದರೆ, 'ಟೆಸ್ಲಾ' ಚಿತ್ರದ ಟೀಸರ್ ಶ್ರುತಿ ಅವರ ರೂಪಾಂತರವನ್ನು ಸೂಚಿಸುವಂತಿದೆ.

ಬುಲೆಟ್ ಓಡಿಸುವ ಶ್ರುತಿ, ಬಾಯಲ್ಲಿ ಸಿಗರೇಟು ಹೊಗೆಯನ್ನು ಬುಸಬುಸನೆಂದು ಬಿಡುವ ಶ್ರುತಿ, ಕತ್ತರಿಸಿಕೊಂಡ ಗಿಡ್ಡ ಕೂದಲಿನ ಶ್ರುತಿ – ಇವೆಲ್ಲ 'ಟೆಸ್ಲಾ'ದ ಟೀಸರ್‌ನಲ್ಲಿ ಕಾಣಿಸುವ ನಾಯಕಿಯ ಬಿಂಬಗಳು. ಇವಿಷ್ಟು ಮಾತ್ರವಲ್ಲ, ಒಟ್ಟು ಏಳು ರೂಪಗಳಲ್ಲಿ ಶ್ರುತಿ ಕಾಣಿಸಿಕೊಂಡಿದ್ದಾರಂತೆ. ಈ ಸ್ತ್ರೀರೂಪಗಳೇ 'ಟೆಸ್ಲಾ' ನಾಯಕಿಪ್ರಧಾನ ಸಿನಿಮಾ ಎನ್ನುವುದನ್ನು ಹೇಳುವಂತಿವೆ. ವಿನೋದ್ ರಾಜ್ ಈ ಚಿತ್ರದ ನಿರ್ದೇಶಕರು. ಈ ಮುನ್ನ ಅವರು 'ಯಶೋಗಾಥೆ' ಎನ್ನುವ ಚಿತ್ರ ನಿರ್ದೇಶಿಸಿದ್ದರು.

ಶ್ರುತಿ ಪ್ರಯೋಗಶೀಲತೆಯನ್ನು ನೆಚ್ಚಿರುವ ಕನ್ನಡದ ಅಪರೂಪದ ನಟಿ. ಭಿನ್ನ ಪಾತ್ರಗಳನ್ನು ಹಂಬಲಿಸುವ ಅವರ ಪ್ರತಿಭೆಯ ಅನಾವರಣಕ್ಕೆ 'ಟೆಸ್ಲಾ' ಹೊಸ ವೇದಿಕೆಯಾಗಿದೆ. ಚರಿತ್ರೆಯ ವಿಸ್ಮೃತಿಗೆ ಸಂದ ವಿಜ್ಞಾನಿಯೊಬ್ಬನ ಹೆಸರು ಟೆಸ್ಲಾ. ಈ ವಿಜ್ಞಾನಿಯ ಹೆಸರನ್ನು ಶೀರ್ಷಿಕೆಯನ್ನಾಗಿಸಿಕೊಂಡಿರುವ ಚಿತ್ರ, ಸೈನ್ಸ್ ಫಿಕ್ಷನ್ ಕಥೆಯನ್ನೊಳಗೊಂಡಿದೆಯಂತೆ.

## 'ಶ್ರೀಸಾಮಾನ್ಯ'ನ ಪರಿಸರ ಕಾಳಜಿ

ಆಧುನಿಕ ಬದುಕಿನ ವೈರುಧ್ಯಗಳನ್ನು ಚಿತ್ರಿಸುವ ಹಂಬಲದಿಂದ ರೂಪುಗೊಂಡಿರುವ ಸಿನಿಮಾ 'ಶ್ರೀಸಾಮಾನ್ಯ'. ಗುಣವಂತ ಮಂಜು ಚಿತ್ರದ ನಿರ್ದೇಶಕರು.

ಇಂದಿನ ಪರಿಸ್ಥಿತಿ ನೋಡಿ. ಪ್ರತಿ ಇಬ್ಬರಿಗೆ ಒಂದು ವಾಹನವಿದೆ. ಆದರೆ, ಪ್ರತಿ ಹತ್ತು ಮಂದಿಗೆ ಒಂದು ಮರವಿದೆ. ಹೀಗೆಯೇ ಪರಿಸ್ಥಿತಿ ಮುಂದುವರಿದರೆ ಇನ್ನು ಹತ್ತು ವರ್ಷಗಳಲ್ಲಿ ಉಸಿರಾಡುವ ಗಾಳಿಗೆ ಕೊರತೆಯುಂಟಾಗಿ, ನಾವೆಲ್ಲ ಆಮ್ಲಜನಕದ ಸಿಲಿಂಡರ್‌ಗಳಿಗೆ ಮೊರೆ ಹೋಗಬೇಕಾಗಬಹುದು. ಈ ಆತಂಕವನ್ನು ಕೇಂದ್ರವಾಗಿಟ್ಟುಕೊಂಡು ಮಂಜು ತಮ್ಮ ಚಿತ್ರ ರೂಪಿಸಿದ್ದಾರೆ. ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮಗಳ ಕುರಿತೂ ಸಿನಿಮಾ ಮಾತನಾಡುತ್ತದಂತೆ. ನಿರ್ದೇಶನದ ಜೊತೆಗೆ ಕಥೆ, ಚಿತ್ರಕಥೆ, ಸಾಹಿತ್ಯವೂ ಅವರದ್ದೇ.

ಪೋಷಕರು ಮಕ್ಕಳ ಹೆಸರಿನಲ್ಲಿ ಆಸ್ತಿ ಮಾಡುವ ಬದಲು, ಅವರ ಹೆಸರಿನಲ್ಲಿ ಮರಗಿಡ ಬೆಳೆಸಬೇಕು ಎನ್ನುವುದು ಚಿತ್ರತಂಡದ ಆಶಯ. ಶಕ್ತಿ ಎಸ್. ಶೆಟ್ಟಿ ಚಿತ್ರದ ನಾಯಕಿ. ನಿರ್ದೇಶಕರು ಕೂಡ ಪ್ರಮುಖ ಪಾತ್ರವೊಂದರಲ್ಲಿ ನಟಿಸಿದ್ದಾರೆ. ರಂಗಭೂಮಿಯ ಸುಮಾರು 50 ಕಲಾವಿದರು ತಾರಾಗಣದಲ್ಲಿರುವುದು ಸಿನಿಮಾದ ವಿಶೇಷಗಳಲ್ಲೊಂದು. ಸುರೇಶ್ ಕೋರೆ ಮತ್ತು ಬಸಯ್ಯ ಹಿರೇಮಠ್ ಛಾಯಾಗ್ರಹಣ ಹಾಗೂ ಇಂದ್ರಸೇನ ಅವರ ಸಂಗೀತ ಸಂಯೋಜನೆ ಇರುವ 'ಶ್ರೀಸಾಮಾನ್ಯ' ಚಿತ್ರೀಕರಣ ಮುಗಿಸಿದ್ದು, ತೆರೆಕಾಣುವ ಸಿದ್ಧತೆ ನಡೆಸುತ್ತಿದೆ.

■ ರಘು